# ಪರಮಹಂಸಪಾರಮ್ಯ
## ಪ್ರಸ್ಥಾನತ್ರಯಭಾಷ್ಯವಾಕ್ಯಗಳು

**सर्वमेव नामरूपकर्माख्यं विकारजातं परमार्थसत्यात्मभावनया त्यक्तं स्यात् । एवमीश्वरात्मभावनया युक्तस्य पुत्राद्येषणात्रयसंन्यासे एवाधिकारः, न कर्मसु ।**

**(ईशावास्योपनिषद्भाष्यम् ६)**

ಭಾವಾರ್ಥ- ಸೃಷ್ಟಿಯಾಗಿರುವ ಈ ಪ್ರಪಂಚವನ್ನು ನಾಮ, ರೂಪ ಮತ್ತು ಕರ್ಮ ಎಂದು ಕರೆಯಲಾಗುತ್ತಿದ್ದು, ಪರಮಾರ್ಥಸತ್ಯನಾದ ಆತ್ಮನ ಜ್ಞಾನವನ್ನು ಪಡೆದು ಈ ಪ್ರಪಂಚವನ್ನು ದೂರ ಮಾಡಬೇಕು. ಆತ್ಮಜ್ಞಾನವೆಂದರೆ, ಪ್ರಪಂಚಕ್ಕೆ ಕಾರಣನಾದ ಬ್ರಹ್ಮನು ನಾನೇ ಆಗಿದ್ದೇನೆ ಎಂಬ ಅರಿವು. ಇದನ್ನು ಪಡೆದವನು ಸಂನ್ಯಾಸಕ್ಕೇ ಅರ್ಹನಾಗಿರುತ್ತಾನೆ. ಅವನು ಶಾಸ್ತ್ರಗಳು ಹೇಳುವ ಯಾಗಾದಿ ಕರ್ಮಗಳನ್ನು ಮಾಡಬೇಕಾಗಿಲ್ಲ. ಏಕೆಂದರೆ ಅವನು ಪುತ್ರ, ವಿತ್ತ(ಸಂಪತ್ತು) ಮತ್ತು ಲೋಕಗಳೆಂಬ ಮೂರು ವಿಧವಾದ ಫಲದಲ್ಲಿ ಆಸೆಯನ್ನು ಬಿಟ್ಟಿರುತ್ತಾನೆ.

**परिव्राट् मुमुक्षुः सर्वाणि भूतानि अव्यक्तादीनि स्थावरान्तानि आत्मन्येव अनुपश्यति, आत्मव्यतिरिक्तानि न पश्यति, सर्वभूतेषु च तेष्वेव च आत्मानम्, तेषामपि भूतानाम् स्वम् आत्मानम् आत्मत्वेन च अनुपश्यति । (ईशावास्योपनिषद्भाष्यम्. ६)**

ಮೋಕ್ಷಾರ್ಥಿಯಾದ ಸಂನ್ಯಾಸಿಯು ಅವ್ಯಕ್ತ (ಮೂಲಕಾರಣ) ದಿಂದ ಆರಂಭಿಸಿ ಸ್ಥಾವರ (ವೃಕ್ಷಾದಿ) ಗಳವರೆಗೆ ಎಲ್ಲ ಭೂತಗಳನ್ನೂ

ತನ್ನಲ್ಲಿಯೇ ಕಾಣುತ್ತಾನೆ. ಅವುಗಳನ್ನು ತನಗಿಂತ ಬೇರೆಯಾಗಿ ನೋಡುವುದಿಲ್ಲ. ಹಾಗೆಯೇ ಆ ಎಲ್ಲ ಭೂತಗಳಲ್ಲಿಯೂ ಕೂಡ ತನ್ನನ್ನೇ ಕಾಣುತ್ತಾನೆ. ಅವೆಲ್ಲವುಗಳ ಆತ್ಮವು ತಾನೇ ಆಗಿದ್ದೇನೆ ಎಂಬ ತತ್ತ್ವಜ್ಞಾನವು ಅವನಿಗೆ ಉಂಟಾಗಿರುತ್ತದೆ.

**ज्ञानमात्रे यद्यपि सर्वाश्रमिणामधिकारः, तथापि संन्यासनिष्ठैव ब्रह्मविद्या मोक्षसाधनं न कर्मसहितेति 'भैक्षचर्यां चरन्तः' (मु.उ. १.२.११) 'संन्यासयोगात्' (मु. उ. ३.२.६) इति च ब्रुवन् दर्शयति। (मुण्डकोपनिषद्भाष्यम्, उपोद्घातः)**

ಉಪನಿಷತ್ತುಗಳು ಪ್ರತಿಪಾದಿಸುವ ಆತ್ಮಜ್ಞಾನವನ್ನು ಪಡೆಯಲು ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಅರ್ಹರಾಗಿರುತ್ತಾರೆ. ಯಾರೊಬ್ಬನಿಗೂ ಇವನು ಜ್ಞಾನವನ್ನು ಪಡೆಯುವುದು ಅಸಾಧ್ಯ ಎಂದು ಹೇಳುವಂತಿಲ್ಲ. ಆದರೆ ಆ ಜ್ಞಾನವನ್ನು ಪಡೆಯಲು ಬೇಕಾದ ಸಾಧನಗಳಲ್ಲಿ ತೊಡಗುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಅಂಥಹ ಸಾಧನಾ ಮಾರ್ಗದಲ್ಲಿ ತೊಡಗುವುದರ ಮೂಲಕ ಜ್ಞಾನ ಅಂದರೆ ಬ್ರಹ್ಮವಿದ್ಯೆಯನ್ನು ಪಡೆಯುವುದು ಸಂನ್ಯಾಸದಲ್ಲಿ ನಿಷ್ಠೆ ಇರುವವನಿಗೆ ಮಾತ್ರ ಸಾಧ್ಯ. ಮೋಕ್ಷವೆಂಬ ಫಲವನ್ನು ಸಾಧಿಸಲು ಬ್ರಹ್ಮವಿದ್ಯೆಯೊಂದೇ ಸಮರ್ಥವಾಗಿದೆ. ಅಲ್ಲಿ ಅದಕ್ಕೆ ಕರ್ಮಗಳು ಬೇಕಾಗಿಲ್ಲ. ಈ ವಿಷಯವನ್ನು 'ಭೈಕ್ಷ್ಯಚರ್ಯಾಂ ಚರಂತಃ' (ಭಿಕ್ಷಾಚರಣೆಯನ್ನು ಮಾಡುತ್ತಾ) 'ಸಂನ್ಯಾಸಯೋಗಾತ್' (ಸಂನ್ಯಾಸಪೂರ್ವಕವಾಗಿ) ಮುಂತಾದ ಶ್ರುತಿಗಳು ತಿಳಿಸಿಕೊಡುತ್ತಿವೆ.

अयमेवेह क्रियावान्यो ज्ञानध्यानादिक्रियावानसम्भिन्नार्यमर्यादः संन्यासी । य एवंलक्षणो नातिवाद्यात्मक्रीड आत्मरतिः क्रियावान्ब्रह्मनिष्ठः, स ब्रह्मविदां सर्वेषां वरिष्ठः ।

(मुण्डकोपनिषद्भाष्यम् ३.१.४)

"ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ" ಎಂಬ ಶ್ರುತಿಯನ್ನಿಟ್ಟುಕೊಂಡು, ಕೆಲವರು ಅಗ್ನಿಹೋತ್ರಾದಿ ಕರ್ಮಕ್ಕೂ ಬ್ರಹ್ಮವಿದ್ಯೆಗೂ ಸಮುಚ್ಚಯವನ್ನು ಹೇಳುತ್ತಾರೆ. ಆದರೆ ಜ್ಞಾನಕರ್ಮಗಳಿಗೆ ಪರಸ್ಪರ ವಿರೋಧವಿರುವುದರಿಂದ ಅದು ಸರಿಯಲ್ಲ. ಯಾವನು ಜ್ಞಾನ-ಧ್ಯಾನಾದಿ ಕ್ರಿಯೆಗಳಲ್ಲಿ ತೊಡಗಿರುವುದರ ಮೂಲಕ ಶಾಸ್ತ್ರೋಕ್ತವಾದ ಮಾರ್ಗದಲ್ಲಿರುವನೋ ಅವನನ್ನೇ ಶ್ರುತಿಯು ಕ್ರಿಯಾವಾನ್ ಎಂಬ ಶಬ್ದದಿಂದ ಹೇಳಿದೆ. ಅವನು ಸಂನ್ಯಾಸಿಯೇ ಆಗಿರುತ್ತಾನೆ. ಬಾಹ್ಯ ಕ್ರಿಯೆಗಳನ್ನು ತೊರೆದು ತನ್ನೊಳಗೆ ತಾನೇ ಕ್ರೀಡಿಸುವವನೂ, ತನ್ನಲ್ಲಿ ತಾನೇ ಆನಂದವನ್ನು ಕಂಡುಕೊಳ್ಳುವವನೂ, ಜ್ಞಾನಧ್ಯಾನಾದಿಕ್ರಿಯೆಗಳಲ್ಲಿ ತೊಡಗಿರುವವನೂ, ಬ್ರಹ್ಮನಿಷ್ಠನೂ ಆಗಿದ್ದಾನೋ, ಅಂಥವನು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನು ಎಂದು ಹಿಂದೆ ಹೇಳಿದ ಶ್ರುತಿವಾಕ್ಯದ ಅರ್ಥವಾಗಿದೆ.

आत्मा नित्यं सत्यादिसाधनैः संन्यासिभिर्लभ्यते, न कादाचित्कैः सत्यादिभिर्लभ्यते । (मुण्डकोपनिषद्भाष्यम् ३.१.५)

ನಿತ್ಯವೂ ಸತ್ಯ, ಜ್ಞಾನ, ಬ್ರಹ್ಮಚರ್ಯ, ತಪಸ್ಸು (ಇಂದ್ರಿಯ ಮತ್ತು ಮನಸ್ಸುಗಳ ನಿಗ್ರಹ) ಮೊದಲಾದ ಸಾಧನಗಳಲ್ಲಿ ತೊಡಗಿರುವವನಿಗೆ ಮಾತ್ರ ಆತ್ಮನ ಅಂದರೆ ಆತ್ಮಜ್ಞಾನದ ಪ್ರಾಪ್ತಿಯಾಗುತ್ತದೆ. ಇಂತಹ

ನಿರಂತರ ಪ್ರಯತ್ನವು ಸಂನ್ಯಾಸಿಗೆ ಮಾತ್ರ ಸಾಧ್ಯ. ಯಾವಾಗಲೋ ಒಮ್ಮೆ ಮಾತ್ರ ಇಂಥಹ ಮಾರ್ಗದಲ್ಲಿ ನಡೆಯುವವನಿಗೆ ಆತ್ಮನು ಸಿಗುವುದಿಲ್ಲ.

**आत्मप्रार्थनासहायभूतान्येतानि च साधनानि बलाप्रमादतपांसि लिङ्गयुक्तानि संन्याससहितानि । (आत्मा) संन्यास-रहिताज्ज्ञानान्न लभ्यते । (मुण्डकोपनिषद्भाष्यम् ३.२.४)**

ಆತ್ಮನ ಕುರಿತಾದ ಉತ್ಕಟೇಚ್ಛೆಯು ಆತ್ಮಜ್ಞಾನಕ್ಕೆ ಕಾರಣವಾಗುತ್ತದೆ. ಈ ಉತ್ಕಟೇಚ್ಛೆಗೆ ಸಂನ್ಯಾಸ ಸಹಿತವಾದ ಆತ್ಮನಿಷ್ಠೆಯಿಂದ ಉಂಟಾದ ಬಲ, ಅಪ್ರಮಾದ (ಲೌಕಿಕ ವಿಷಯಗಳಲ್ಲಿ ಅನಾಸಕ್ತಿ) ಮತ್ತು ತಪಸ್ಸು(ಜ್ಞಾನ)ಗಳು ಸಾಧನಗಳಾಗಿವೆ. ಸಂನ್ಯಾಸರಹಿತವಾದ ಜ್ಞಾನದಿಂದ ಆತ್ಮನು ಲಭಿಸುವುದಿಲ್ಲ.

**ते (वेदान्तविज्ञानसुनिश्चितार्थाः) च संन्यासयोगात् सर्वकर्म-परित्यागलक्षणयोगात्केवल-ब्रह्मनिष्ठास्वरूपाद्योगात् यतयः यतनशीलाः शुद्धसत्त्वाः परामृताः सन्तः परिमुच्यन्ति ।**

**(मुण्डकोपनिषद्भाष्यम् ३.२.६)**

ಉಪನಿಷತ್ತುಗಳು ಪ್ರತಿಪಾದಿಸುವ ಆತ್ಮನ ಕುರಿತಾಗಿ ನಿಶ್ಚಯವುಳ್ಳವರು ಸಂನ್ಯಾಸಯೋಗದಿಂದ ಮುಕ್ತಿಯನ್ನು ಹೊಂದುತ್ತಾರೆ. ಸಂನ್ಯಾಸಯೋಗವೆಂದರೆ ಎಲ್ಲ ಯಾಗಾದಿ ಕರ್ಮಗಳನ್ನು ಬಿಟ್ಟು ಬ್ರಹ್ಮನಲ್ಲಿಯೇ ಏಕಾಗ್ರತೆಯಿಂದ ಮನಸ್ಸನ್ನು ನಿಲ್ಲಿಸುವುದು. ಅಂತಹ ಯತ್ನಶೀಲರಾದ ಸಾಧಕರು, ಶುದ್ಧವಾದ ಅಂತಃಕರಣವುಳ್ಳವರಾಗಿ

ಸಂನ್ಯಾಸಯೋಗದಿಂದ ಬ್ರಹ್ಮಸ್ವರೂಪವೇ ಆದ ಮುಕ್ತಿಯನ್ನು ಹೊಂದುತ್ತಾರೆ.

**अविद्याकामदोषनिमित्तायाः वाङ्मनःकायप्रवृत्तेः पाङ्क्तलक्षणायाः, विदुषः अविद्यादिदोषाभावात् अनुपपत्तेः, क्रियाभावमात्रं व्युत्थानम्, न तु यागादिवत् अनुष्ठेयरूपं भावात्मकम् ।**

**(ऐतरेयोपनिषद्भाष्यम् – उपोद्घातः)**

ಶಾಸ್ತ್ರಗಳು ಹೇಳುವ ಕರ್ಮಗಳಿಗೆ ಯಜಮಾನ, ಪತ್ನಿ, ಪುತ್ರ, ದೈವ ಮತ್ತು ಮಾನುಷವಿತ್ತಗಳೆಂಬ ಐದರ ಅಪೇಕ್ಷೆ ಇರುವುದರಿಂದ ಇವುಗಳಿಗೆ ಪಾಂಕ್ತ ಎಂದು ಹೆಸರು. ಕರ್ಮವು ವಾಕ್ಕು, ಮನಸ್ಸು ಮತ್ತು ದೇಹವೆಂಬ ತ್ರಿಕರಣಗಳ ಪ್ರವೃತ್ತಿ ರೂಪವಾಗಿದ್ದು ಇದು ಅವಿದ್ಯೆ ಮತ್ತು ಕಾಮಗಳೆಂಬ ದೋಷಗಳಿಂದ ಉಂಟಾಗುತ್ತದೆ. ಅವಿದ್ಯೆಯೇ ಮೊದಲಾದ ದೋಷಗಳಿಂದ ಮುಕ್ತರಾದ ಜ್ಞಾನಿಗಳಿಗೆ ಕರ್ಮಾನುಷ್ಠಾನ ಇರುವುದಿಲ್ಲ. ಹೀಗೆ ಕರ್ಮಗಳಿಲ್ಲದಿರುವಿಕೆಯೇ ಸಂನ್ಯಾಸ, ಅದು ಯಾಗಾದಿಗಳಂತೆ ಕ್ರಿಯಾರೂಪವಲ್ಲ.

**यत्तु भिक्षोः शरीरधारणमात्रप्रवृत्तस्य प्रवृत्तेर्नियतत्वम्, तत्प्रवृत्तेर्न प्रयोजकम् । आचमनप्रवृत्तस्य पिपासापगमवन्नान्यप्रयोजनार्थत्वमवगम्यते । (ऐतरेयोपनिषद्भाष्यम् – उपोद्घातः)**

ಸಂನ್ಯಾಸಿಯು ಶರೀರಧಾರಣೆಗಾಗಿ ಮಾತ್ರ ಮಾಡುವ ಭಿಕ್ಷಾಟನೆ ಮುಂತಾದ ಕರ್ಮಗಳಿಗೆ ವಿಧಿ ವಾಕ್ಯವು ಕಾರಣವಲ್ಲ. ಪ್ರವೃತ್ತಿಗೆ ಕಾರಣವಲ್ಲ. ಅದು ಹೇಗೆಂದರೆ, ಶುದ್ಧಿಗೋಸ್ಕರ ಮಾಡುವ ಆಚಮನದಿಂದ ಬಾಯಾರಿಕೆಯು ನಿವಾರಣೆಯಾಗುತ್ತದೆ. ಆದರೆ

ಬಾಯಾರಿಕೆಯ ನಿವಾರಣೆಯೆಂಬ ಉದ್ದೇಶವೇ ಆಚಮನಕ್ಕೆ ಕಾರಣವಲ್ಲ. ಹಾಗೆಯೇ, ಶರೀರಧಾರಣೆಗಾಗಿ ಮಾಡುವ ಕರ್ಮಗಳು ಶಾಸ್ತ್ರವಿಧಿಗಳಿಂದ ಮಾಡುವ ಕರ್ಮಗಳಂತೆ ಅಲ್ಲ. ಅಂತಹ ಕರ್ಮಗಳಿಗೆ ಬೇರೆ ಯಾವ ಪ್ರಯೋಜನವೂ ಇಲ್ಲ.

**अविदुषापि मुमुक्षुणा पारिव्राज्यं कर्तव्यमेव; तथा च 'शान्तो दान्तः' (बृ.उ ४.४.२३) इत्यादिवचनं प्रमाणम् । शमदमादीनां चात्मदर्शनसाधनानामन्याश्रमेष्वनुपपत्तेः । ब्रह्मचर्यादिविद्या-साधनानां च साकल्येनात्याश्रमिषूपपत्तेर्गार्हस्थ्येऽसम्भवात् ।**

**(ऐतरेयोपनिषद्भाष्यम् – उपोद्घातः)**

ಜ್ಞಾನಿಯಲ್ಲದಿದ್ದರೂ, ಮೋಕ್ಷದಲ್ಲಿ ಪ್ರಬಲ ಇಚ್ಛೆಯುಳ್ಳವನು ಸಂನ್ಯಾಸವನ್ನು ಸ್ವೀಕರಿಸಲೇಬೇಕು. ಈ ವಿಷಯದಲ್ಲಿ 'ಶಾಂತೋ ದಾಂತಃ' ಎಂಬ ಶ್ರುತಿವಾಕ್ಯವೇ ಪ್ರಮಾಣ. ಆತ್ಮಸಾಕ್ಷಾತ್ಕಾರಕ್ಕೆ ಸಾಧನಗಳೆನಿಸಿದ ಶಮ (ಮನಸ್ಸಿನ ನಿಗ್ರಹ), ದಮ (ಬಾಹ್ಯೇಂದ್ರಿಯ ನಿಗ್ರಹ) ಮೊದಲಾದವುಗಳಲ್ಲಿ ತೊಡಗುವುದು ಸಂನ್ಯಾಸಾಶ್ರಮವನ್ನು ಬಿಟ್ಟು ಉಳಿದ ಆಶ್ರಮಗಳಲ್ಲಿ ಅಸಾಧ್ಯ. ಜೊತೆಗೆ ಬ್ರಹ್ಮಚರ್ಯವೇ ಮೊದಲಾದ ಜ್ಞಾನಸಾಧನಗಳೂ ಸಂನ್ಯಾಸಾಶ್ರಮದಲ್ಲಿ ಮಾತ್ರ ಪರಿಪೂರ್ಣವಾಗಿ ಸಿದ್ಧಿಸುತ್ತವೆ. ಗೃಹಸ್ಥಾಶ್ರಮದಲ್ಲಿ ಇದು ಸಾಧ್ಯವಿಲ್ಲ.

**प्रतिपन्नगार्हस्थ्यस्यापि 'गृहाद्वनी भूत्वा प्रव्रजेद्यदि वेतरथा ब्रह्मचर्यादेव प्रव्रजेद्गृहाद्वा वनाद्वा इत्यात्मदर्शनसाधनत्वेन इष्यत एव पारिव्राज्यम् । (ऐतरेयोपनिषद्भाष्यम् – उपोद्घातः)**

ಗೃಹಸ್ಥಾಶ್ರಮವನ್ನು ಸ್ವೀಕರಿಸಿದವನಿಗೂ ಕೂಡ 'ಗೃಹಾದ್ವನೀ ಭೂತ್ವಾ ಪ್ರವ್ರಜೇದ್ಯದಿ ವೇತರಥಾ ಬ್ರಹ್ಮಚರ್ಯಾದೇವ ಪ್ರವ್ರಜೇದ್ಗೃಹಾದ್ವಾ ವನಾದ್ವಾ' (ಗೃಹಸ್ಥಾಶ್ರಮದಿಂದ ವಾನಪ್ರಸ್ಥವನ್ನು ಹೊಂದಿ ಸಂನ್ಯಾಸವನ್ನು ಸ್ವೀಕರಿಸಬೇಕು ಅಥವಾ ಬ್ರಹ್ಮಚರ್ಯಾಶ್ರಮದಿಂದಾಗಲೀ, ಗೃಹಸ್ಥಾಶ್ರಮದಿಂದಾಗಲೀ, ವಾನಪ್ರಸ್ಥಾಶ್ರಮದಿಂದಾಗಲೀ ಸಂನ್ಯಾಸವನ್ನು ಸ್ವೀಕರಿಸಬಹುದು) ಎಂಬ ಶ್ರುತಿಯು ಗೃಹಸ್ಥಾಶ್ರಮವನ್ನು ಸ್ವೀಕರಿಸಿದವನೂ ಕೂಡ ಮುಮುಕ್ಷುವಾದರೆ, ಆತ್ಮದರ್ಶನಕ್ಕೆ ಸಾಧನವಾದ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂದು ಹೇಳಿದೆ.

**आत्मविदो व्युत्थानव्यतिरेकेण न यथाकामित्वम्, न चान्यत्कर्तव्यम् । (ऐतरेयोपनिषद्भाष्यम् – उपोद्घातः)**

ಆತ್ಮಜ್ಞಾನಿಯು ಮಾಡಬೇಕಾಗಿರುವುದು ಸಂನ್ಯಾಸದ ಹೊರತು ಬೇರೇನೂ ಇಲ್ಲ. ಅವನು ಮನಸ್ಸಿಗೆ ಬಂದಂತೆ ವ್ಯವಹರಿಸುವುದೂ ಅಸಂಭವ.

**कामनिमित्तपुत्रवित्तादिसम्बन्धनियमाभावमात्रम्, न तु ततः अन्यत्रगमनम् व्युत्थानमुच्यते ।**

**(ऐतरेयोपनिषद्भाष्यम् – उपोद्घातः)**

ಶಾಸ್ತ್ರದಲ್ಲಿ ಹೇಳಿದ ವ್ಯುತ್ಥಾನವೆಂದರೆ, ಇರುವ ಸ್ಥಳದಿಂದ ಬೇರೆಡೆಗೆ ಹೋಗುವುದಲ್ಲ. ಆಸೆಯಿಂದಾಗಿ ಉಂಟಾದ ಪುತ್ರ, ಸಂಪತ್ತು ಮೊದಲಾದವುಗಳೊಡನೆ ಯಾವಾಗಲೂ ಇರುವ ಸಂಬಂಧವನ್ನು ಬಿಡುವುದೇ ವ್ಯುತ್ಥಾನ. ಇದೇ ಸಂನ್ಯಾಸ.

ब्रह्मसंस्थशब्दः निवृत्तसर्वकर्मतत्साधनपरिव्राडेकविषये अत्याश्रमिणि परमहंसाख्ये भवितुमर्हति ।

(छान्दोग्योपनिषद्भाष्यम्, २-२३-१)

ಎಲ್ಲ ಕರ್ಮ ಮತ್ತು ಅದರ ಸಾಧನಗಳನ್ನು ಬಿಟ್ಟು ಹಾಗೂ ಇತರ ಆಶ್ರಮಗಳನ್ನು ಮೀರಿ ನಿಂತ ಪರಮಹಂಸ ಎಂಬ ಸಂನ್ಯಾಸಿಯಲ್ಲಿ ಮಾತ್ರ ಬ್ರಹ್ಮಸಂಸ್ಥ ಎಂಬ ಶಬ್ದವನ್ನು ಬಳಸಲಾಗುತ್ತದೆ,

इदमेव एकं वेदोक्तं पारिव्राज्यम्, न यज्ञोपवीतत्रिदण्ड-कमण्डल्वादिपरिग्रहः । (छान्दोग्योपनिषद्भाष्यम्, २-२३-१)

ಎಲ್ಲ ಕರ್ಮಗಳನ್ನು ಪರಿತ್ಯಾಗ ಮಾಡಿದ ಪರಮಹಂಸವೆಂಬ ಸ್ಥಿತಿಯು ಮಾತ್ರ ವೇದಗಳು ಹೇಳಿರುವ ಸಂನ್ಯಾಸವಾಗಿದೆ, ಯಜ್ಞೋಪವೀತ ಮತ್ತು ದಂಡ, ಕಮಂಡಲುಗಳ ಧಾರಣೆಯು ವೇದೋಕ್ತವಾದ ಸಂನ್ಯಾಸವಲ್ಲ.

वेदान्तप्रमाणजनितैकत्वप्रत्ययवत एव कर्मनिवृत्तिलक्षणं पारिव्राज्यं ब्रह्मसंस्थत्वं च । (छान्दोग्योपनिषद्भाष्यम्, २-२३-१)

ಆತ್ಮನು ಒಬ್ಬನೇ ಎಂಬ ಉಪನಿಷತ್ತುಗಳಿಂದ ಹುಟ್ಟಿದ ನಿಶ್ಚಯವುಳ್ಳವನಿಗೆ ಮಾತ್ರ ಕರ್ಮವನ್ನು ಪರಿತ್ಯಾಗ ಮಾಡುವಂತಹ ಸಂನ್ಯಾಸ ಮತ್ತು ಬ್ರಹ್ಮಸಂಸ್ಥತೆಯು (ಬ್ರಹ್ಮನಲ್ಲಿಯೇ ನಿಲ್ಲುವದು) ಸಿದ್ಧಿಸುತ್ತದೆ.

इदं त्यक्तसर्वबाह्यैषणैः अनन्यशरणैः परमहंसपरिव्राजकैः अत्याश्रमिभिर्वेदान्तविज्ञानपरैरेव वेदनीयम् ।

(छान्दोग्योपनिषद्भाष्यम्, ८-१२-१)

ಹೊರಗಿನ ಎಲ್ಲ ವಸ್ತುಗಳಲ್ಲಿ ಆಸೆಯನ್ನು ಬಿಟ್ಟು ಆತ್ಮನಲ್ಲಿಯೇ ಶರಣಾದ, ಇತರ ಆಶ್ರಮಗಳನ್ನು ಮೀರಿ ನಿಂತ, ಉಪನಿಷತ್ತುಗಳು ಪ್ರತಿಪಾದಿಸುವ ಜ್ಞಾನದಲ್ಲಿಯೇ ನಿರತರಾದ ಪರಮಹಂಸರಾದ ಸಂನ್ಯಾಸಿಗಳು ಮಾತ್ರ ಆತ್ಮನನ್ನು ತಿಳಿಯಲು ಸಾಧ್ಯ.

**न साधनान्तरसहिता ब्रह्मविद्या पुरुषार्थसाधनम्, सर्वविरोधात्, साधननिरपेक्षैव पुरुषार्थसाधनम् इति पारिव्राज्यं सर्वसाधनसन्यासलक्षणम् अङ्गत्वेन विधित्स्यते ।**

**(बृहदारण्यकोपनिषद्भाष्यम् २.४.१)**

ಬ್ರಹ್ಮವಿದ್ಯೆಯು ಬೇರೊಂದು ಸಾಧನದೊಂದಿಗೆ ಸೇರಿ ಮೋಕ್ಷಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಅದು ಇತರ ಎಲ್ಲವುಗಳನ್ನು ನಿವೃತ್ತಿಗೊಳಿಸುವುದರಿಂದ ಅವುಗಳ ವಿರೋಧಿಯಾಗಿದೆ. ಬೇರೊಂದು ಸಾಧನದ ಅಪೇಕ್ಷೆಯಿಲ್ಲದೆಯೇ ಅದು ಮೋಕ್ಷಕ್ಕೆ ಕಾರಣವಾಗುವುದರಿಂದ, ಎಲ್ಲ ಸಾಧನಗಳನ್ನು ಬಿಡುವ ರೂಪವಾಗಿರುವ ಸಂನ್ಯಾಸವನ್ನು ಬ್ರಹ್ಮವಿದ್ಯೆಯ ಅಂಗವಾಗಿ ಶ್ರುತಿಯು ಬೋಧಿಸಿದೆ.

**यस्यैव पुरुषस्य उपमृदितः प्रत्ययः ब्रह्मक्षत्राद्यात्मविषयः, तस्य तत्प्रत्ययसन्यासात् तत्कार्याणां कर्मणां कर्मसाधनानां च अर्थप्राप्तः सन्यासः (बृ.उ.भा.२.४.१)**

ಆತ್ಮನಲ್ಲಿ ಬ್ರಾಹ್ಮಣ, ಕ್ಷತ್ರಿಯ ಮುಂತಾದ ಭೇದಗಳಿವೆ ಎಂಬ ಭಾವನೆಯು ಯಾವ ವ್ಯಕ್ತಿಯಿಂದ ದೂರವಾಗಿದೆಯೋ, ಅವನಿಗೆ ಆ ಭಾವನೆಯು ದೂರವಾದ ಕಾರಣದಿಂದಲೇ, ಅದರಿಂದ ಹುಟ್ಟಿದ ಕರ್ಮ

ಮತ್ತು ಅದರ ಸಾಧನಗಳನ್ನು ಬಿಡುವುದು ಅಂದರೆ ಸಂನ್ಯಾಸವು ಸ್ವತಃ ಪ್ರಾಪ್ತವಾಗುತ್ತದೆ.

**परमहंसपारिव्राज्यमेव व्युत्थानलक्षणं प्रतिपद्येत आत्मवित् सर्वकर्मसाधनपरित्यागरूपम् ।** (बृहदारण्यकोपनिषद्भाष्यम्.३.५.१)

ಆತ್ಮಜ್ಞಾನಿಯು ಎಲ್ಲಾ ಕರ್ಮ ಮತ್ತು ಅದರ ಸಾಧನಗಳನ್ನು ಬಿಡುವಂತಹ ವ್ಯುತ್ಥಾನ (ಸಂನ್ಯಾಸ) ರೂಪವಾದ ಪರಮಹಂಸ ಎಂಬ ಸಂನ್ಯಾಸವನ್ನು ಗ್ರಹಣ ಮಾಡಬೇಕು..

**पूर्वे ब्राह्मणा एतमात्मानम् असाधनफलस्वभावं विदित्वा सर्वस्मात् साधनफलस्वरूपात् एषणालक्षणात् व्युत्थाय भिक्षाचर्यं चरन्ति स्म, दृष्टादृष्टार्थं कर्म तत्साधनं च हित्वा, तस्मात् अद्यत्वेऽपि ब्राह्मणः पाण्डित्यं निर्विद्य बाल्येन तिष्ठासेत् ।**

(बृहदारण्यकोपनिषद्भाष्यम् ३.५.१)

ಹಿಂದಿನ ಬ್ರಹ್ಮಜ್ಞಾನಿಗಳು ಆತ್ಮನು ಸಾಧನ ಮತ್ತು ಫಲರೂಪವಲ್ಲ ಎಂದು ತಿಳಿದು, ಸಾಧನ ಮತ್ತು ಫಲರೂಪವಾದ ಅಂದರೆ ಏಷಣಾ (ಆಸೆ) ರೂಪದ ಸಂಸಾರವನ್ನು ಬಿಡುತ್ತಿದ್ದರು ಅರ್ಥಾತ್ ದೃಷ್ಟ ಮತ್ತು ಅದೃಷ್ಟ ಫಲವನ್ನು ನೀಡುವ ಕರ್ಮ ಮತ್ತು ಅದರ ಸಾಧನಗಳನ್ನೆಲ್ಲ ಬಿಟ್ಟು ಕೇವಲ ಶರೀರ ಧಾರಣೆಗಾಗಿ ಭಿಕ್ಷಾಚರಣೆಯನ್ನು ಮಾಡುತ್ತಿದ್ದರು. ಅದಕ್ಕಾಗಿ, ಇಂದೂ ಸಹ ಜ್ಞಾನಿಗಳು ಪಾಂಡಿತ್ಯವನ್ನು ಅಂದರೆ ಸಂನ್ಯಾಸ ಪರ್ಯಂತವಾದ, ನಿಶ್ಚಯಾತ್ಮಕವಾದ ಆತ್ಮಜ್ಞಾನವನ್ನು ಪಡೆದು ಹೊರಗಿನ ವಿಷಯಗಳ ಬಗ್ಗೆ ಇರುವ ಒಲವನ್ನು ದೂರಗೊಳಿಸುವ ಆ ಆತ್ಮಜ್ಞಾನದ ಬಲದಿಂದ ಸ್ಥಿರವಾಗಿ ನಿಲ್ಲಬೇಕು.